330-A (7)

**ಸಂಖ್ಯೆ: ಎಲ್‌ಸಿಕ್ಯೂ/ಸಿಆರ್/151/2023-24** **ದಿನಾಂಕ:29.02.2024**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ ರವರು ನಿಯಮ 330 ಎ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಪ್ರಶ್ನೆಗೆ ಉತ್ತರಿಸುವ ಬಗ್ಗೆ**

| | |
|---|---|
| **ಪ್ರಶ್ನೆ:-** | ದೂರದ ಊರಿಂದ ಬಂದಿದ್ದೇನೆ. ಬಸ್‌ನಲ್ಲಿ ಟಿಕೇಟ್ ಉಚಿತವಿರುವ ಕಾರಣ ಮೇಲಿಂದ ಮೇಲೆ ಬರುತ್ತಲೇ ಇರುತ್ತೇನೆ. ಎಷ್ಟು ಬಾರಿ ಬಂದರೂ ಸ್ನಾನ ಮಾಡಿ ಸೀರೆ ಉಟ್ಟುಕೊಳ್ಳಲು ಪ್ರಶಸ್ತವಾದ ಸುರಕ್ಷಿತ ಸ್ಥಳವಿಲ್ಲ. ನಿತ್ಯ ನನ್ನಂತೆಯೇ ಸಾವಿರಾರು ಮಹಿಳೆಯರು ಬರುತ್ತಾರೆ. ಇದು ಹೆಣ್ಣು ಮಕ್ಕಳ ಗೌರವದ ಪ್ರಶ್ನೆ ಅಲ್ಲವೇ; ಕುಂದಾನಗರಿ ಬೆಳಗಾವಿ ಜಿಲ್ಲೆ ಗೋಕಾಕ್‌ದಿಂದ ಬಂದಿದ್ದ ಲಕ್ಷ್ಮಮ್ಮ ಹೊಸಮನಿ ಎಂಬ ಮಹಿಳೆ ಹೀಗೆ ಪ್ರಶ್ನಿಸಿ ಹುಲಿಗೆಮ್ಮ ದೇವಿಯತ್ತ ಮುಖ ಮಾಡಿ ಕೈ ಮುಗಿದರೂ, ಇದೊಂದು ಉದಾಹರಣೆಯಷ್ಟೇ, ಹೀಗೆ ಅನೇಕ ಹೆಣ್ಣು ಮಕ್ಕಳ ಬೇಡಿಕೆಯೂ ಇದು, ಉತ್ತರ ಕರ್ನಾಟಕದ ಧಾರ್ಮಿಕ ತಾಣ ಮತ್ತು ದೇಶದ ಪ್ರಮುಖ ಶಕ್ತಿ ಪೀಠಗಳಲ್ಲಿ ಒಂದಾದ ಕೊಪ್ಪಳ ತಾಲ್ಲೂಕಿನ ಹುಲುಗಿಯ ಹುಲಿಗೆಮ್ಮ ದೇವಸ್ಥಾನ ಪ್ರತಿ ವರ್ಷ ಕೋಟ್ಯಾಂತರ ರೂಪಾಯಿ ಆದಾಯ ಗಳಿಸುತ್ತಿದೆ. ರಾಜ್ಯ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿರುವ ಕಾರಣ ಎಲ್ಲವೂ ಸರ್ಕಾರದ ಅಧೀನದಲ್ಲಿ ನಡೆಯುತ್ತಿದೆ. ಆದರೆ ಈ ಕ್ಷೇತ್ರದಲ್ಲಿ ಮೂಲ ಸೌಕರ್ಯಗಳ ಕೊರತೆ ಪ್ರಮುಖವಾಗಿ ಕಾಡುತ್ತಿದೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಗೋವಾದಿಂದ ಹುಲುಗಿಗೆ ಬರುವ ಭಕ್ತರು ತಮ್ಮ ಮನೆಯ ಸಂಪ್ರದಾಯ ಪಾಲನೆಯ ಒಂದೆರಡು ದಿನಗಳ ಕಾಲ ಹುಲುಗಿಯಲ್ಲಿ ಉಳಿದುಕೊಳ್ಳುತ್ತಾರೆ. ಅವರಿಗೆ ವಸತಿ ಸೌಲಭ್ಯಗಳ ಚಿಂತೆಯಿಲ್ಲ; ಆದರೆ ಸ್ವಚ್ಛತೆ, ಶೌಚಾಲಯ ಮತ್ತು ಹೆಣ್ಣುಮಕ್ಕಳು ಬಟ್ಟೆ ಬದಲಿಸಲು ಸುರಕ್ಷಿತ ಜಾಗ ಬೇಕಾಗಿದೆ. ಈ ದೇವಸ್ಥಾನ ತುಂಗಾಭದ್ರಾ ನದಿ ದಡದಲ್ಲಿಯೇ ಭಕ್ತರ ಅನುಕೂಲಕ್ಕೆ ಸೌಲಭ್ಯಗಳನ್ನು ಕಲ್ಪಿಸುವ ತುರ್ತು ಅಗತ್ಯವಿದೆ. ಆದಾಯ ಗಳಿಕೆಯಲ್ಲಿಯೂ ಹುಲಿಗಿ ಮುಂಚೂಣಿಯಲ್ಲಿದೆ. ಹಿಂದಿನ ಹತ್ತು ತಿಂಗಳ ಅವಧಿಯಲ್ಲಿ ದೇವಸ್ಥಾನಕ್ಕೆ 6.37 ಕೋಟಿ ಆದಾಯ, ಚಿನ್ನ ಹಾಗೂ ಬೆಳ್ಳಿ ಕೂಡ ಕಾಣಿಕೆ ರೂಪದಲ್ಲಿ ದೇವಸ್ಥಾನಕ್ಕೆ ಸಂದಾಯವಾಗಿವೆ. ಹಲವು ವರ್ಷಗಳಿಂದ ದೇವಸ್ಥಾನಕ್ಕೆ ಭಕ್ತರಂತೆಯೇ ಭರಪೂರ ಕಾಣಿಕೆಯೂ ಹರಿದು ಬರುತ್ತಿರುವ ಕಾರಣ ಹಣಕ್ಕೆ ಕೊರತೆಯಿಲ್ಲ. ಆದರೆ ಹಲವು ಬಾರಿ ಅಭಿವೃದ್ಧಿಗೆ ರೂಪಿಸಿದ್ದ 'ಮಾಸ್ಟರ್ ಪ್ಲ್ಯಾನ್' ಅನುಷ್ಠಾನಕ್ಕೆ ಬರುತ್ತಿಲ್ಲ. ಮುಜರಾಯಿ ಖಾತೆ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರವರು ಎರಡು ತಿಂಗಳ ಹಿಂದೆ ಹುಲುಗಿಗೆ ಭೇಟಿ ನೀಡಿದಾಗ ಎರಡು ವರ್ಷಗಳಲ್ಲಿ ಹುಲುಗಿಯಲ್ಲಿ ಸಂಪೂರ್ಣವಾಗಿ ಅಭಿವೃದ್ಧಿ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಅದರ ಮೊದಲ ಹೆಜ್ಜೆಯಾಗಿ ಸರ್ಕಾರ ಈಗ ಈ ಸಲದ ಬಜೆಟ್‌ನಲ್ಲಿ ಹುಲುಗಿ ಅಭಿವೃದ್ಧಿ ಪ್ರಾಧಿಕಾರ ರಚಿಸುವುದಾಗಿ ಘೋಷಣೆ ಮಾಡಿದೆ. ಹಿಂದಿನ ಬಜೆಟ್‌ನಲ್ಲಿಯೂ ಜಿಲ್ಲೆಗೆ ಅನೇಕ ಯೋಜನೆಗಳನ್ನು ಘೋಷಣೆಯಾಗಿದ್ದು, ಅವುಗಳಲ್ಲಿ ಬಹುತೇಕ ಕಾರ್ಯರೂಪಕ್ಕೆ ಬಂದಿಲ್ಲ. ಆದರೆ ಖುದ್ದು ಸಚಿವರೇ ಆಸಕ್ತಿ ತೋರಿರುವ ಕಾರಣ ಪ್ರಾಧಿಕಾರ ರಚನೆ ತ್ವರಿತವಾಗಬಹುದು ಎನ್ನುವ ನಿರೀಕ್ಷೆ ಜಿಲ್ಲೆಯ ಜನರದ್ದು. ಹುಲುಗಿಯ ಭಕ್ತರಿಗೆ ಕುಡಿಯುವ ನೀರು, ಸ್ವಚ್ಛತೆ, ದೇವಸ್ಥಾನದ ಸುತ್ತಲೂ ಪ್ರಾಣಿ ಬಲಿಗೆ ಸಂಪೂರ್ಣ ನಿಷೇಧ ಹೇರುವುದು, ನದಿಯಲ್ಲಿ ತೆಂಗಿನ ಕಾಯಿ, ಸ್ನಾನ ಮಾಡಿ ಬಿಟ್ಟು ಹೋಗುವ ಬಟ್ಟೆ, ಪ್ಲಾಸ್ಟಿಕ್ ತ್ಯಾಜ್ಯ ಹೀಗೆ ಅನೇಕ ಅವ್ಯವಸ್ಥೆಗೆ ಕಡಿವಾಣ ಹಾಕಬೇಕಾಗಿದೆ. ದೇವಸ್ಥಾನದ ಅಧೀನದಲ್ಲಿಯೇ ಸಾಕಷ್ಟು ಜಾಗವು ಇದ್ದು, ಅದನ್ನು ಸಮರ್ಥವಾಗಿ ಬಳಸಿಕೊಂಡರೆ ಅಭಿವೃದ್ಧಿ ಸಾಧ್ಯ. ಹುಲಿಗೆಮ್ಮ ದೇವಿ ಕ್ಷೇತ್ರಕ್ಕೆ ಜಾತ್ರೆ, ಹುಣ್ಣಿಮೆ, ಶುಕ್ರವಾರ ಮತ್ತು ಮಂಗಳವಾರ ಲಕ್ಷಾಂತರ ಭಕ್ತರು ಬರುವುದು ಸಾಮಾನ್ಯ, ಆಗ ಅವರಿಗೆಲ್ಲಾ ಸಮರ್ಪಕವಾಗಿ ಸೌಲಭ್ಯ ಸಿಗುವಂತೆ ಆಗಬೇಕು. ಹಿಂದೆ ರೂಪಿಸಿದ್ದ 'ಮಾಸ್ಟರ್ ಪ್ಲ್ಯಾನ್‌ಗಳು' ಕಛೇರಿ ಕಡತದಲ್ಲಿಯೇ ಉಳಿದುಕೊಂಡಿವೆ. ಈಗ ಪ್ರತ್ಯೇಕ ಪ್ರಾಧಿಕಾರವೇ ಆಗುವುದರಿಂದ ದೂರದೃಷ್ಟಿವುಳ್ಳ ಅಭಿವೃದ್ಧಿ ಯೋಜನೆ ರೂಪುಗೊಳ್ಳಬೇಕಾದ ಅಗತ್ಯವಿದೆ. ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ನಿಯಮ 330 ಎ ಅಡಿಯಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ. |

**ಉತ್ತರ:** ಕೊಪ್ಪಳ ಜಿಲ್ಲೆ ಕೊಪ್ಪಳ ತಾಲೂಕಿನ ಹುಲಿಗಿ ಗ್ರಾಮದ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನವು ಹಿಂದೂ ಧಾರ್ಮಿಕ ದತ್ತಿ ಇಲಾಖೆಯ 'ಎ' ಪ್ರವರ್ಗದ ಅಧಿಸೂಚಿತ ದೇವಾಲಯವಾಗಿರುತ್ತದೆ. ಈ ದೇವಸ್ಥಾನವು ಉತ್ತರ ಕರ್ನಾಟಕದಲ್ಲಿಯೇ ಪ್ರಸಿದ್ಧವಾದ ದೇವಸ್ಥಾನವಾಗಿದೆ. ಈ ದೇವಸ್ಥಾನಕ್ಕೆ ಕರ್ನಾಟಕ ರಾಜ್ಯಾದ್ಯಂತ ಹಾಗೂ ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು

ಮಹಾರಾಷ್ಟ್ರಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳನ್ನು ಹೊಂದಿರುವ ಶಕ್ತಿ ಕೇಂದ್ರವಾಗಿದೆ. ಪ್ರಸ್ತುತ ದೇವಾಲಯಕ್ಕೆ ದಿನದಿಂದ ದಿನಕ್ಕೆ ಆಗಮಿಸುತ್ತಿರುವ ಭಕ್ತಾಧಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಹಾಲಿ ಆಗಮಿಸುತ್ತಿರುವ ಭಕ್ತಾಧಿಗಳ ಸಂಖ್ಯೆ ಸಾಮಾನ್ಯ ದಿನಗಳಲ್ಲಿ 5 ರಿಂದ 10 ಸಾವಿರ ಜನ, ಪ್ರತಿ ಶುಕ್ರವಾರ 15 ರಿಂದ 50 ಸಾವಿರ ಜನ, ಪ್ರತಿ ಮಂಗಳವಾರ 30 ರಿಂದ 1 ಲಕ್ಷದ ವರೆಗೆ ಮತ್ತು ಪ್ರತಿ ಹುಣ್ಣಿಮೆ, ಜಾತ್ರೆ ವಿಶೇಷ ದಿನಗಳಂದು 1 ಲಕ್ಷದಿಂದ 3 ಲಕ್ಷದ ವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಾಲಯಕ್ಕೆ ಬರುತ್ತಾರೆ.

- ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ ಸಂಕ್ರಾಂತಿ ದಿನದಂದು ನದಿ ನೀರಿನ ಪುಣ್ಯ ಸ್ನಾನಕ್ಕಾಗಿ ಹೆಚ್ಚಿನ ಭಕ್ತಾಧಿಗಳು ಬರುವ ಸಂಭವವಿರುವುದರಿಂದ ಮುಂಚಿತವಾಗಿಯೇ ತುಂಗಭದ್ರ ಯೋಜನೆಯ ತುರ್ತು ನೀರಾವರಿ ಸಲಹಾ ಸಮಿತಿಗೆ ನದಿಗೆ ನೀರು ಬಿಡಲು ಮೌಖಿಕವಾಗಿ ಕೋರಲಾಗಿತ್ತು. ಆದರೂ ಸಂಕ್ರಾಂತಿ ಸಮಯದಲ್ಲಿ ನದಿಗೆ ನೀರನ್ನು ಸಮಿತಿಯು ಬಿಡುಗಡೆ ಮಾಡಿರುವುದಿಲ್ಲ. ಕನ್ನಡ ಪ್ರಭ ಪತ್ರಿಕಾ ಪ್ರಕಟಣೆ ವರದಿಯನ್ನು ಆಧರಿಸಿ ದೇವಾಲಯದ ವತಿಯಿಂದ ತುಂಗಭದ್ರಾ ಜಲಾಶಯದಿಂದ ನದಿಗೆ ನೀರು ಬಿಡಲು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ . ನಂ.1 ತುಂಗಭದ್ರಾ ಜಲಾಶಯ ವಿಭಾಗ ಮುನಿರಾಬಾದ್-583233 ತಾ:ಜಿ:ಕೊಪ್ಪಳ ಇವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ ರವರಿಗೆ ದೇವಾಲಯದ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು ದಿನಾಂಕ:19.01.2024ರಂದು ಪತ್ರವನ್ನು ಬರೆದಿರುತ್ತಾರೆ.
- ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ ಭಕ್ತರು ತಂಗಲು 107 ಕೊಠಡಿಗಳು ಇರುತ್ತವೆ. ಶ್ರೀಕ್ಷೇತ್ರ ಹುಲಿಗಿಯಲ್ಲಿ ಖಾಸಗಿ ವ್ಯಕ್ತಿಗಳ ವಸತಿ ಗೃಹಗಳಲ್ಲಿ 250ಕ್ಕೂ ಹೆಚ್ಚು ಕೊಠಡಿಗಳು ಲಭ್ಯವಿರುತ್ತವೆ. ನದಿ ತೀರದಲ್ಲಿ ಪ್ರತ್ಯೇಕವಾಗಿ ನಾಲ್ಕು ಸ್ನಾನಗೃಹಗಳು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ನಾಲ್ಕು ಸ್ನಾನಗೃಹಗಳು, ವಿಕಲಚೇತನರಿಗೆ ಒಂದು ಸ್ನಾನಗೃಹದ ಸೌಲಭ್ಯವನ್ನು ಒದಗಿಸಲಾಗಿದೆ. ಅಲ್ಲದೇ ನದಿತೀರದಲ್ಲಿ ಜಿಂದಾಲ್ ಪೈಪ್‌ಲೈನ್ ಕೆಳಗಡೆ ಕೊಳವೆಬಾವಿ ಮುಖಾಂತರ 6-ಕೊಳಾಯಿಗಳ ಶವರ್‌ಗಳನ್ನು ಅಳವಡಿಸಲಾಗಿದ್ದರೂ ಸಹಾ ಅವುಗಳನ್ನು ಸದ್ಬಳಕೆ ಮಾಡಿಕೊಳ್ಳದೇ ಭಕ್ತಾಧಿಗಳು ಸಂಕ್ರಾಂತಿಯ ದಿನದಂದು ನದಿ ನೀರಿನ ಸ್ನಾನವು ಪುಣ್ಯವೆಂದು ಭಾವಿಸಿರುವ ಮೇರೆಗೆ, ಬತ್ತಿ ಹೋಗಿರುವ ನದಿಯಲ್ಲಿ ಅಲ್ಪಸ್ವಲ್ಪ ನಿಂತಿರುವ ನೀರಿನಲ್ಲಿಯೇ ಸ್ನಾನ ಮಾಡಿರುತ್ತಾರೆ.
- ಈ ಬಗ್ಗೆ ಭಕ್ತಾಧಿಗಳಲ್ಲಿ ಅರಿವು ಮೂಡಿಸಲು ನದಿಯಲ್ಲಿರುವ ನೀರು ಮಲೀನಗೊಂಡಿದ್ದು ಯಾರೂ ನದಿಗೆ ಸ್ನಾನ ಮಾಡಲು ಮತ್ತು ಕುಡಿಯಲು ಮತ್ತು ಬಳಸಲು ಯಾರೂ ಹೋಗಬಾರದೆಂದು ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಳವಡಿಸಲಾಗಿರುತ್ತದೆ. ಅಲ್ಲದೇ ದೇವಾಲಯದಲ್ಲಿನ ಧ್ವನಿವರ್ಧಕ ಮೂಲಕ ಜಾಗೃತಿಯನ್ನು ಮೂಡಿಸಲಾಗಿರುತ್ತದೆ. ನದಿತೀರದಲ್ಲಿ 6-ಜನ ಗೃಹರಕ್ಷಕ ದಳದ ಸಿಬ್ಬಂದಿಗಳನ್ನು ನಿಯೋಜಿಸಿ ನದಿತೀರದಲ್ಲಿ ಭಕ್ತಾಧಿಗಳಿಗೆ ಅರಿವು ಮೂಡಿಸಲು ಕ್ರಮ ಜರುಗಿಸಲಾಗಿರುತ್ತದೆ.
- ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಸಮಗ್ರ ಅಭಿವೃದ್ಧಿ ಬಗ್ಗೆ ಈಗಾಗಲೇ ಮಾನ್ಯ ಮುಜರಾಯಿ ಸಚಿವರು ದಿನಾಂಕ:19.12.2023 ರಂದು ದೇವಾಲಯದ ಕಛೇರಿಗೆ ಭೇಟಿ ನೀಡಿ ದೇವಾಲಯದ ಕಟ್ಟಡ ಕಾಮಗಾರಿ, ಚಂದ್ರಶಾಲೆ, ವಸತಿ ಮತ್ತು ಮೂಲಭೂತ ಸೌಕರ್ಯಗಳು ಭಕ್ತಾಧಿಗಳು ತಂಗಲು ನೆರಳಿನ ಶೆಡ್‌ಗಳು, ನದಿತೀರದಲ್ಲಿ ಸ್ನಾನಘಟ್ಟಗಳು ಹಾಗೂ ದೇವಾಲಯಕ್ಕೆ ಸಂಪರ್ಕಿಸುವ ಸರ್ವೀಸ್ ರಸ್ತೆಗಳು ಇತ್ಯಾದಿ ಪ್ರಮುಖ ಸೌಲಭ್ಯಗಳನ್ನು ಒಳಗೊಂಡಂತೆ, ಮಹಾನಕ್ಷೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲು ಹಾಗೂ ಉದ್ದೇಶಿತ ಕಾಮಗಾರಿಗಳ ಅಂದಾಜು ಪಟ್ಟಿ ನಕ್ಷೆಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶನ ನೀಡಿರುತ್ತಾರೆ. ಅಲ್ಲದೇ **ದಿನಾಂಕ:16.02.2024ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಆಯ-ವ್ಯಯ ಭಾಷಣದಲ್ಲಿ ಕಂಡಿಕೆ 412ರಲ್ಲಿ ಕೊಪ್ಪಳ ಜಿಲ್ಲೆಯ ಶ್ರೀ ಹುಲಿಗೆಮ್ಮ ದೇವಿ ದೇವಾಲಯದ ಅಭಿವೃದ್ಧಿಗಾಗಿ ಪ್ರತ್ಯೇಕ ಪ್ರಾಧಿಕಾರವನ್ನು ರಚಿಸಲಾಗುವುದೆಂದು ಘೋಷಣೆ ಮಾಡಿರುತ್ತಾರೆ.** ಮುಂದುವರೆದಂತೆ ಧಾರ್ಮಿಕ ದತ್ತಿ

ಕಛೇರಿಯ ವಾಸ್ತುಶಿಲ್ಪ ಸಮಿತಿಯು ದಿನಾಂಕ:09.01.2024ರಂದು ಭೇಟಿ ನೀಡಿ ಈಗಾಗಲೇ ದೇವಾಲಯದಿಂದ ಈ ಹಿಂದೆ ಅನುಮೋದನೆಗೊಂಡಿರುವ ಮಹಾನಕ್ಷೆಯನ್ನು ಪರಿಷ್ಕರಿಸಿ ಅನುಮತಿಗೆ ಸಲ್ಲಿಸುವ ಬಗ್ಗೆ ಮೌಖಿಕ ಸೂಚನೆ ನೀಡಿದ್ದು ಸದರಿ ಸಮಿತಿಯ ವರದಿಯನ್ನು ಆಧರಿಸಿ ದೇವಾಲಯದ ಸಮಗ್ರ ಅಭಿವೃದ್ಧಿ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.

- ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ವ್ಯಾಪ್ತಿಯ ಸರಹದ್ದು ದೇವಸ್ಥಾನಕ್ಕೆ ಹೊಂದಿಕೊಂಡಂತೆ 40 ಎಕರೆಗೂ ಹೆಚ್ಚು ಪ್ರದೇಶವನ್ನು ಒಳಗೊಂಡಿದೆ. ಭಕ್ತಾದಿಗಳು ತಂಗಲು ಸಾಮಾನ್ಯ ಕೊಠಡಿಗಳು, ಕಾಟೇಜುಗಳು, ಅಮ್ಮ ನಿಲಯ ವಸತಿಗೃಹಗಳನ್ನು ಒಳಗೊಂಡಂತೆ ಒಟ್ಟು 107 ಕೊಠಡಿಗಳಿದ್ದು, ಭಕ್ತರು ಇವುಗಳನ್ನು ಉಪಯೋಗಿಸಿಕೊಳ್ಳಲು ಒದಗಿಸಲಾಗಿರುತ್ತದೆ. ಭಕ್ತಾದಿಗಳ ಆರೋಗ್ಯದ ದೃಷ್ಟಿಯಿಂದ ನದಿತೀರದಲ್ಲಿ ಹಾಗೂ ದೇವಸ್ಥಾನದ ಆವರಣದಲ್ಲಿ ಬ್ಲೀಚಿಂಗ್ ಪೌಡರ್ ಮತ್ತು ಸೊಳ್ಳೆಗಳ ನಿಯಂತ್ರಣಕ್ಕಾಗಿ ಫಾಗಿಂಗ್ ಮಾಡಿಸಲಾಗುತ್ತಿದೆ. ಪ್ರತಿನಿತ್ಯ ದೇವಾಲಯದ ಸ್ವಚ್ಛತಾ ಸಿಬ್ಬಂದಿಗಳು ಮತ್ತು ದಿನಗೂಲಿ ಸಿಬ್ಬಂದಿಗಳನ್ನು ಬಳಸಿಕೊಂಡು ದೇವಾಲಯದಲ್ಲಿ ಉತ್ಪತ್ತಿಯಾಗುವ ಘನ ದ್ರವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಂಗಡಿಸಿ ಹೊಸಹಳ್ಳಿ ಗ್ರಾಮದ ಹೊನ್ನೂರಮಟ್ಟಿಯಲ್ಲಿ ಇರುವ ಬಹುಗ್ರಾಮ ಪಂಚಾಯಿತಿಯ ತ್ಯಾಜ್ಯ ವಿಲೇವಾರಿ ಘಟಕಕ್ಕೆ ವಿಲೇವಾರಿ ಮಾಡುವುದರ ಮೂಲಕ ಸ್ವಚ್ಛತೆಯನ್ನು ಮಾಡಲಾಗುತ್ತಿದೆ.
- ದೇವಾಲಯಕ್ಕೆ ಬರುವ ಭಕ್ತರು ಶೇಕಡಾ 80%ರಷ್ಟು ಗ್ರಾಮಾಂತರ ಪ್ರದೇಶದಿಂದ ಬರುವವರಾಗಿದ್ದು, ಬಹುತೇಕ ಭಕ್ತರು ದೇವಾಲಯದ ಖಾಲಿಜಾಗದಲ್ಲಿ ಠಿಕಾಣಿ ಹೂಡಿ ಅಲ್ಲಿಯೇ ಹೊಸದಾಗಿ ಅಡುಗೆ ಮಾಡಿ ಊಟ ಮಾಡುವುದರಿಂದ ಶ್ರೀಕ್ಷೇತ್ರದಲ್ಲಿ ಹೆಚ್ಚಿನ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಬಹುತೇಕ ಭಕ್ತರು ದೇವಸ್ಥಾನದ ಬಯಲು ಜಾಗದಲ್ಲಿ ಊಟದ ಎಲೆ, ಉಳಿದ ಆಹಾರ ಪದಾರ್ಥ, ನಿಷೇಧಿತ ಪ್ಲಾಸ್ಟಿಕ್ ವಸ್ತುಗಳು, ಹಸಿಕಸ ಮತ್ತು ಒಣಕಸವನ್ನು ಬಿಟ್ಟುಹೋಗುತ್ತಿದ್ದು, ಸಕಾಲದಲ್ಲಿ ದೇವಾಲಯದಲ್ಲಿ ಲಭ್ಯವಿರುವ ಸಿಬ್ಬಂದಿಗಳನ್ನು ಬಳಸಿಕೊಂಡು ದೇವಾಲಯದ ಸುತ್ತಮುತ್ತಲಿರುವ ಜಾಗವನ್ನು ಪ್ರತಿನಿತ್ಯ ಸ್ವಚ್ಛವಾಗಿ ಇಟ್ಟುಕೊಳ್ಳಲು ಕ್ರಮ ವಹಿಸಲಾಗುತ್ತಿದೆ.
- ದೇವಾಲಯದಲ್ಲಿ ಭಕ್ತಾದಿಗಳಿಗೆ ಕುಡಿಯುವ ನೀರಿನ ಜೊತೆಗೆ ಊಟದ ವ್ಯವಸ್ಥೆ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಭಕ್ತಾಧಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ (4 ಆರ್ ಓ ಫಿಲ್ಟರ್), ಭಕ್ತಾಧಿಗಳು ತಂಗಲು ನೆರಳಿನ ಶೆಡ್ ಸೌಲಭ್ಯ, ವಸತಿ ಗೃಹಗಳು, ಅಮ್ಮ ನಿಲಯ-44, ಕಾಟೇಜ್-13, ಯಾತ್ರಿ ನಿವಾಸ,-8, ಸಾಮಾನ್ಯ ಕೊಠಡಿ.32, ಸ್ನಾನಗೃಹ ಒಳಗೊಂಡಂತೆ ಶೌಚಾಲಯ-70 ಮಧ್ಯಾಹ್ನ ಮತ್ತು ರಾತ್ರಿ ದಾಸೋಹ ವ್ಯವಸ್ಥೆ ಮಾಡಲಾಗಿರುತ್ತದೆ. ಈ ಮೂಲಕ ಭಕ್ತಾದಿಗಳ ಆರೋಗ್ಯ ಮತ್ತು ಸ್ವಚ್ಛತೆಗಾಗಿ ಕ್ರಮ ವಹಿಸಲಾಗುತ್ತಿದೆ.
- ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ ಈಗಾಗಲೇ ಮಹಾನಕ್ಷೆಯನ್ನು ತಯಾರಿಸಿ ಸರ್ಕಾರದ ಮುಖ್ಯವಾಸ್ತುಶಿಲ್ಪಿಗಳಿಂದ ಅನುಮೋದನೆ ಪಡೆಯಲಾಗಿರುತ್ತದೆ. ಪ್ರಸ್ತುತ ಇರುವ ಮಹಾನಕ್ಷೆಯನ್ನು ಇಲಾಖಾ ವಾಸ್ತುಶಿಲ್ಪ ಸಮಿತಿಯವರು ಪರಿಷ್ಕರಿಸಲು ಸೂಚಿಸಿರುವ ಮೇರೆಗೆ ಮಹಾನಕ್ಷೆಯನ್ನು ಪರಿಷ್ಕರಿಸಲು ಪ್ರಸ್ತಾವನೆ ಸಿದ್ಧಪಡಿಸಲಾಗಿರುತ್ತದೆ. ಪರಿಷ್ಕೃತ ಮಹಾನಕ್ಷೆ ಅನುಮೋದನೆ ಪಡೆದ ನಂತರ ದೇವಾಲಯಕ್ಕೆ ಚಂದ್ರಶಾಲೆ ಕಾಮಗಾರಿಯನ್ನು, ಮುಂದಿನ 10 ವರ್ಷಗಳ ಅವಧಿಯ ಗುರಿಯಾಗಿರಿಸಿಕೊಂಡು ಭಕ್ತಾದಿಗಳಿಗೆ ಇನ್ನೂ ಹೆಚ್ಚಿನ ಮೂಲಭೂತ ಸೌಕರ್ಯ ಮತ್ತು ವಸತಿ ಸೌಕರ್ಯಗಳನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. 1)ದೇವಾಲಯದ ಗರ್ಭಗುಡಿ ಸುತ್ತಲೂ ಚಂದ್ರಶಾಲೆ ಮತ್ತು ನಾಲ್ಕು ದಿಕ್ಕಿನಲ್ಲಿ ಗೋಪುರಗಳ ನಿರ್ಮಾಣ ಮಾಡುವ ಕಾಮಗಾರಿ. 2)ದೇವಾಲಯದ ಪ್ರದೇಶದಲ್ಲಿ ಯು.ಜಿ.ಡಿ. ಒಳ ಚರಂಡಿಯೋಜನೆ ಕಾಮಗಾರಿ. 3) ಕಾರ್ಯನಿರ್ವಾಹಣಾಧಿಕಾರಿಗಳ ಕಛೇರಿ. 4)ನೆರಳಿನ ಶೆಡ್ 5) ಕೊಳಚೆ ನೀರು ಸಂಸ್ಕರಣಾ ಘಟಕ(ಎಸ್.ಟಿ.ಪಿ) 6)ಮುಖ್ಯ ಅತಿಥಿಗಳ ವಸತಿ ಗೃಹ. 7)ಡಾರ್ಮೆಟರಿ ಹಾಲ್. 8)ದಾಸೋಹ ಭವನ 9)ವಾಹನ ನಿಲುಗಡೆ ಸ್ಥಳ 10)ಶೌಚಾಲಯಗಳು 11)ಪುರುಷರ ಸ್ನಾನಗೃಹ ಮತ್ತು ಶೌಚಾಲಯ 12)ಪುರುಷರ ಬಟ್ಟೆ ಬದಲಾಯಿಸುವ ಸ್ಥಳ 13) ಮಹಿಳೆಯರ ಸ್ನಾನಗೃಹ ಮತ್ತು

ಶೌಚಾಲಯ 14)ಮಹಿಳೆಯರ ಬಟ್ಟೆ ಬದಲಾಯಿಸುವ ಸ್ಥಳ 15)ತ್ಯಾಜ್ಯ ವಿಂಗಡಣಾ ಸ್ಥಳ 16)ಫಿಲ್ಟರ್ ಬೆಡ್ ಘಟಕ17)ವಾಹನ ನಿಲುಗಡೆ ಸ್ಥಳ 18)ನದಿ ಹತ್ತಿರ ಸ್ನಾನಘಟ್ಟ (ಪುರುಷರಿಗೆ & ಮಹಿಳೆಯರಿಗೆ) 19.ವಿಜಯನಗರ ಕಾಲುವೆ ಸ್ಥಳಾಂತರಿಸುವ ಕಾಮಗಾರಿ. 20) ಶಿವಪುರದಿಂದ ಹಾಗೂ ಹೊಸಪೇಟೆಯ ಮುಖಾಂತರ ದೇವಾಲಯಕ್ಕೆ ಬರಲು ಪ್ರತ್ಯೇಕ ಸರ್ವೀಸ್ ರಸ್ತೆ ನಿರ್ಮಾಣ (ಜಮೀನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿದೆ.)

- ನದಿಯಲ್ಲಿ ನೀರಿಲ್ಲದ ಕಾರಣ ಭಕ್ತಾದಿಗಳಿಗೆ ಸ್ನಾನ ಮಾಡಲು ತಾತ್ಕಾಲಿಕ ಶವರ್‌ಗಳನ್ನು (ನಲ್ಲಿ) ವ್ಯವಸ್ಥೆ ಮಾಡಲಾಗಿದೆ. ದೇವಾಲಯದ ಕಾಟೇಜ್ ವಸತಿ ಗೃಹದ ಹತ್ತಿರ ಸ್ನಾನ ಮಾಡಲು ಕುಡಿಯಲು ಮತ್ತು ಸ್ನಾನ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ.
- ಮಾಸ್ಟರ್ ಪ್ಲ್ಯಾನ್ ಪ್ರಕ್ರಿಯೆ ಚಾಲನೆಗೊಂಡಿದ್ದು ಸರ್ಕಾರದಿಂದ ಅನುಮೋದನೆಗೊಂಡ ಕೂಡಲೇ ನದಿತೀರದಲ್ಲಿ ಶಾಶ್ವತ ಸ್ನಾನಘಟ್ಟಗಳನ್ನು ನಿರ್ಮಿಸುವುದರ ಜೊತೆಗೆ ಇತರೆ ಎಲ್ಲಾ ಸೌಕರ್ಯಗಳನ್ನು ಹಂತ ಹಂತವಾಗಿ ನಿರ್ಮಾಣ ಮಾಡಲು ಕ್ರಮ ವಹಿಸಲಾಗುತ್ತದೆ.
- ದೇವಾಲಯಕ್ಕೆ ಬರುವ ಭಕ್ತರಿಗೆ ಶುದ್ಧ ಕುಡಿಯುವ ನೀರು, ತಂಗಲು ವಸತಿ ಗೃಹಗಳನ್ನು ಮದ್ಯಾಹ್ನ ಮತ್ತು ರಾತ್ರಿ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈಗಾಗಲೇ ಭಕ್ತರಿಗೆ 60-ಪುರುಷರಿಗೆ 60-ಮಹಿಳೆಯರಿಗೆ ಶೌಚಾಲಯ ಮತ್ತು ಸ್ನಾನಗೃಹಗಳನ್ನು ನಿರ್ಮಾಣ ಮಾಡಲು ನಿರ್ಮಿತಿ ಕೇಂದ್ರದಿಂದ ಅಂದಾಜುಪಟ್ಟಿಗಳನ್ನು ತಯಾರಿಸಲಾಗಿದ್ದು, ಆಡಳಿತಾತ್ಮಕ ಮಂಜೂರಾತಿ ಪಡೆಯಲು ಪ್ರಸ್ತಾವನೆ ಸಲ್ಲಿಸಲು ಕ್ರಮ ವಹಿಸಲಾಗುತ್ತಿದೆ. ಹಾಗೂ ಮುಂದುವರೆದಂತೆ ದೇವಾಲಯದ ಮಾಸ್ಟರ್‌ಪ್ಲ್ಯಾನ್ ಅನುಮೋದನೆಯಾದ ಇನ್ನೂ ಹೆಚ್ಚಿನ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.
- ಈಗಾಗಲೇ ದೇವಾಲಯದಲ್ಲಿ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾದ ಶೌಚಾಲಯಗಳನ್ನು ನಿರ್ಮಿಸಲಾಗಿರುತ್ತದೆ. ನದಿ ತೀರದಲ್ಲಿ ಶೌಚಾಲಯಗಳು ಮತ್ತು ದೇವಾಲಯದ ಮುಂಭಾಗದಲ್ಲಿ ಶೌಚಾಲಯಗಳು ಮತ್ತು ಸ್ನಾನಗೃಹಗಳು ಇರುತ್ತವೆ. ಪ್ರತಿ ಜಾತ್ರೆ ಮತ್ತು ಭಾರತ ಹುಣ್ಣಿಮೆ ಮತ್ತು ವಿಶೇಷ ದಿನಗಳಲ್ಲಿ ಭಕ್ತಾದಿಗಳಿಗೆ ತಾತ್ಕಾಲಿಕ ಶೌಚಾಲಯ ಮತ್ತು ಶವರ್ ಮಾಡಲಾಗುತ್ತಿದೆ. ಮುಂದಿನ ಹಂತದಲ್ಲಿ ಮಾನ್ಯ ನ್ಯಾಯಾಲಯದ ನಿರ್ದೇಶನದಂತೆ ನದಿ ತೀರದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕ(ಎಸ್.ಟಿ.ಪಿ), ಡಾರ್ಮೆಟರಿ ಹಾಲ್, ವಾಹನ ನಿಲುಗಡೆ ಸ್ಥಳ, ಶೌಚಾಲಯಗಳು, ಪುರುಷರ ಸ್ನಾನಗೃಹ ಮತ್ತು ಶೌಚಾಲಯ, ಮಹಿಳೆಯರ ಸ್ನಾನಗೃಹ ಮತ್ತು ಶೌಚಾಲಯ ಮಹಿಳೆಯರ ಬಟ್ಟೆ ಬದಲಾಯಿಸುವ ಸ್ಥಳ, ಫಿಲ್ಟರ್ ಬೆಡ್ ಘಟಕ ಮತ್ತು ನದಿ ಹತ್ತಿರ ಸ್ನಾನಘಟ್ಟ (ಪುರುಷರಿಗೆ & ಮಹಿಳೆಯರಿಗೆ) ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೊಂಡು ಭಕ್ತರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅಭಿವೃದ್ಧಿ ಪಡಿಸಲಾಗುವುದು.
- ಶ್ರೀ ಹುಲಿಗೆಮ್ಮ ದೇವಿ ದೇವಾಲಯದ ಸಮಗ್ರ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳೊಂದಿಗೆ, ಸಮನ್ವಯ ಸಾದಿಸುವ ಸಲುವಾಗಿ ಸರ್ಕಾರವು ನೂತನವಾಗಿ ಹುಲಿಗೆಮ್ಮ ದೇವಿ ದೇವಾಲಯಕ್ಕೆ ಪ್ರತ್ಯೇಕ ಪ್ರಾಧಿಕಾರವನ್ನು ರಚಿಸಲು ವಿಧೇಯಕವನ್ನು ರೂಪಿಸಿದ್ದು, ಉಭಯ ಸದನಗಳಲ್ಲಿ ಅನುಮೋದನೆಯಾಗಿರುತ್ತದೆ. ಮೇಲೆ ತಿಳಿಸಿರುವಂತೆ ಶ್ರೀ ಹುಲಿಗೆಮ್ಮ ದೇವಾಲಯಕ್ಕೆ ಬರುವ ಭಕ್ತರಿಗೆ ಮೂಲಭೂತ ಸೌಕರ್ಯಗಳನ್ನು ಮತ್ತು ಭಕ್ತರ ಆರೋಗ್ಯ ರಕ್ಷಣೆಗಾಗಿ ಬೇಕಾದ ಎಲ್ಲಾ ರೀತಿಯ ಸೌಕರ್ಯಗಳನ್ನು ಕಲ್ಪಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**